# 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**CC 3170/2024** **PW- 1**

ದಿಃ **03.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು**.**

**ಮುಂದುವರೆದ ಪಾಟಿಸವಾಲುಃ ಆರೋಪಿ ಪರ ಶ್ರೀ ಎಸ್ ಜಿ ಎನ್ ವಕೀಲರಿಂದಃ**

**10.** ಸತ್ತೂರ ಬಸ್ ನಿಲ್ದಾಣದ ಹತ್ತಿರ ಕನಕ ಅಂತಾ ಹೊಟೇಲ ಇದೆ ಎಂದರೆ ಸರಿ. ಮನೆ ಕಟ್ಟುವ ವಿಷಯದಲ್ಲಿ ಆರೋಪಿ ನನ್ನ ಗ್ರಾಹಕ ಎಂದರೆ ಸರಿ. ಮನೆ ಕಟ್ಟುವ ಕರಾರಿನ ಆದಾರದ ಮೇಲೆ ಆರೋಪಿಯ ಮನೆಯನ್ನು ಕಟ್ಟಲು ಒಪ್ಪಂದ ಮಾಡಿಕೊಂಡಿದ್ದೆ ಎಂದರೆ ಸರಿ. ಈ ಚೆಕ್ಕು ವಿಷಯವಾಗಿ ವಿದ್ಯಾಗಿರಿ ಪೊಲಿಸನವರು ನನ್ನನ್ನು ಯಾವತ್ತು ಪೊಲಿಸ್ ಠಾಣೆಗೆ ಕರೆಸಿಲ್ಲ. ವಿದ್ಯುಚ್ಚಕ್ತಿ ಸಂಪರ್ಕ ಪಡೆಯುವ ಸಲುವಾಗಿ ಚೆಕ್ಕಿನ ಅವಶ್ಯಕತೆ ಇದೆ ಅಂತಾ ನಾನು ಆರೋಪಿಯಿಂದ ಒಂದು ಚೆಕ್ಕನ್ನು ಪಡೆದು ಅದನ್ನು ದುರುಪಯೋಗ ಮಾಡಿಕೊಂಡಿದ್ದರ ಸಂಬಂದವಾಗಿ ಆರೋಪಿ ದೂರು ಕೊಟ್ಟ ಆದಾರದ ಮೇಲೆ ವಿದ್ಯಾಗಿರಿ ಪೊಲಿಸನವರು ನನ್ನನ್ನು ಕರೆಸಿ ವಿಚಾರಣೆ ಮಾಡಿದ್ದರಾ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ ತನ್ನನ್ನು ಕರೆಸಿಲ್ಲ ಎಂದು ನುಡಿಯುತ್ತಾರೆ.

11. ಈ ಹಂತದಲ್ಲಿ ಆರೋಪಿ ಪರ ವಕೀಲರು ತಾವು ಹಾಜರುಪಡಿಸಿದ pen-drive ನಲ್ಲಿರುವ ರೆಕಾರ್ಡಿಂಗಗಳನ್ನು ಸಾಕ್ಷಿಗೆ ಲ್ಯಾಪಟಾಪನಲ್ಲಿ ಕೇಳಿಸಿದ್ದು ಮತ್ತು ಆ ರೆಕಾರ್ಡಿಂಗಗಳಿಗೆ ಸಂಬಂದಪಟ್ಟ ಮಾತುಕತೆಯನ್ನು ಲಿಖಿತ ರೂಪದಲ್ಲಿ ಸಲ್ಲಿಸಿದ್ದು ಸಾಕ್ಷಿ ರೆಕಾರ್ಡಿಂಗಗಳು ಲಿಖಿತ ರೂಪದಲ್ಲಿವೆ ಅಂತಾ ನುಡಿದಿದ್ದರಿಂದ ಇವುಗಳ ಪರಾಮರ್ಶೆ ಸಲುವಾಗಿ 2 ರೆಕಾರ್ಡಿಂಗಗಳ ಪ್ರತಿಗಳನ್ನು ನಿಡಿ.3 ಮತ್ತು 4 ಎಂದು, pen-drive ನ್ನು ನಿಡಿ.5 ಎಂದು ಗುರುತಿಸಲಾಯಿತು.

12. ನಿಡಿ.5 ರಲ್ಲಿರುವ ಸಂಭಾಷಣೆಗಳು ನನ್ನ ಮತ್ತು ಆರೋಪಿಯ ನಡುವೆ ಆಗಿರುವ ಸಂಭಾಷಣೆಗಳು ಎಂದರೆ ಸರಿಯಲ್ಲ. ನನ್ನ ಪ್ರಕಾರ ನಿಡಿ.5 ರ ಸಂಭಾಷಣೆಗಳಲ್ಲಿರುವ ದ್ವನಿ ನನ್ನದಲ್ಲ. ಆರೊಪಿಯ ದ್ವನಿಯ ಬಗ್ಗೆ ನನಗೆ ಗೊತ್ತಿಲ್ಲ. ಈ ಸಂಭಾಷಣೆಗಳಲ್ಲಿರುವ ನನ್ನ ದ್ವನಿಯನ್ನು ವಿಚಾರಣೆ ಮಾಡಲು ನನ್ನ ಅಬ್ಯಂತರ ಇಲ್ಲ. ನಿಡಿ.5 ಸಂಬಾಷಣೆಯಲ್ಲಿರುವ ದ್ವನಿ ನನ್ನದಿದ್ದರೂ ಸಹ ಹಾಗೂ ಚೆಕ್ಕನ್ನು ದುರುಪಯೋಗ

ಮಾಡಿಕೊಂಡಿದ್ದೇನೆ ಎನ್ನುವ ವಿಚಾರ ಗೊತ್ತಾಗುತ್ತದೆ ಅಂತಾ ಆ ಸಂಭಾಷಣೆ ಮತ್ತು ಧ್ವನಿ ನನ್ನದಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಎಚ್ ಡಿ ಎಮ್ ಸಿ ಯವರ ಕಟ್ಟಡ ಕಟ್ಟುವ ನಿಯಮಾವಳಿಗಳ ಬಗ್ಗೆ ಗೊತ್ತಿದೆ. ನಾನು ಕಟ್ಟಡವನ್ನು ಹುಬ್ಬಳ್ಳಿ ದಾರವಾಡ ಮಹಾನಗರ ಪಾಲಿಕೆ ನಿಯಮಾವಳಿಗಳನ್ನು ಪಾಲಿಸಿ ಕಟ್ಟಿರುತ್ತೇನೆ. ಅಬಿಯಂತರರು ಹೇಳಿದಂತೆ ನಾನು ಕಟ್ಟಿದ್ದೇನೆ. ಸುತ್ತಲೂ ಎರಡೂವರೆ ಅಡಿ ಜಾಗೆ ಬಿಟ್ಟಿದ್ದಾರೆ. ಎಚ್ ಡಿ ಎಮ್ ಸಿ ಯವರ ನಿಯಮಾವಳಿ ಪ್ರಕಾರ ಎರಡೂವರೆ ಅಡಿ ಸೆಟ್ ಬ್ಯಾಕ್ ಬಿಡಬೇಕು. ಸ್ಟೆರ್ ಕೇಸ್ ನ ಮೆಟ್ಟಿಲುಗಳ ಪೈಕಿ ಎರಡು ಮೆಟ್ಟಿಲುಗಳು ಬಾಗಿಲಿಗಿಂತ ಮುಂದೆ ಇದ್ದವು ಎಂದರೆ ಸರಿಯಲ್ಲ. ಸಾಕ್ಷಿ ಬಾಗಿಲಿಗೆ ಸಮವಾಗಿದ್ದವು ಎಂದು ನುಡಿಯುತ್ತಾರೆ. ನೀರಿನ ಟ್ಯಾಂಕ್ ಮುಖ್ಯ ಬಾಗಿಲಿಗಿಂತ ಮೇಲೆ ಇತ್ತು ಎಂದರೆ ಸರಿಯಲ್ಲ. ಅಬಿಯಂತರ ಯಾರು ಉಸ್ತುವಾರಿ ಮಾಡಿದ್ದರ ಎನ್ನುವ ಹೆಸರು ನನಗೆ ಗೊತ್ತಿಲ್ಲ. ಆರೋಪಿಗೆ ಗೊತ್ತು. ನಮಗೆ ಮನೆ ಕಟ್ಟುವಾಗ ಅಬಿಯಂತರರ ಹೆಸರು ಮತ್ತು ಮೊಬೈಲ್ ನಂಬರ ಕೇಳುವ ಅವಶ್ಯಕತೆ ಬರಲಿಲ್ಲ. ಅಬಿಯಂತರರಿಗೆ ಆರೋಪಿ ಹಣ ಕೊಟ್ಟಿರಬೇಕು. ಪ್ರತಿ ಚದರ ಅಡಿಗೆ ಅಬಿಯಂತರರಿಗೆ ಮಾಲಿಕರು ಎಷ್ಟು ಹಣ ಕೊಡುತ್ತಾರೆ ಎನ್ನುವುದು ಗೊತ್ತಿಲ್ಲ. ವಾಟರ್ ಟ್ಯಾಂಕ್ ಬಾಗಿಲಿಗಿಂತ ಮೇಲೆ ಹಾಗೂ ಎರಡು ಮೆಟ್ಟಿಲುಗಳನ್ನು ಬಾಗಿಲು ಒಳಗಡೆ ಬಂದಿದ್ದರಿಂದ ಅವುಗಳನ್ನು ಒಡೆಸಿ ಹೊಸದಾಗಿ ಕಟ್ಟಿಸಿದ್ದರಿಂದ ಹೆಚ್ಚಿಗೆಯಾಗಿ ರೂ 1,60,000/- ವಾಟರ್ ಟ್ಯಾಂಕಗೆ ರೂ 1,80,000/- ಮೆಟ್ಟಿಲುಗಳ ರಿಪೇರಿ ಸಲುವಾಗಿ ಖರ್ಚು ಆರೋಪಿಗೆ ಬಂದಿದೆ ಎಂದರೆ ಸರಿಯಲ್ಲ. ಬಾಗಿಲ ಕೆಳಗೆ ಇರುವ ಬೀಮನಲ್ಲಿ ನಾನು ಮಣ್ಣು ಹಾಕಿ ಮುಚ್ಚಿದ್ದೆವು ಎಂದರೆ ಸರಿಯಲ್ಲ. ಈ ವಿಚಾರ ಟ್ಯಾಂಕ್ ಒಡೆದಾಗ ಆರೋಪಿಗೆ ಗೊತ್ತಾಯಿತು ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ತೊರಿದ ಫೊಟೊ ಪ್ರಕಾರ ಕಟ್ಟಡದ ಮೆಟ್ಟಿಲುಗಳನ್ನು ಕಟ್ಟಿದೆ ಎಂದರೆ ಸರಿ. ಸದರಿ ಮೆಟ್ಟಿಲುಗಳಿರುವ ಫೊಟೊವನ್ನು ನಿಡಿ.2(ಎ) ಎಂದು ಗುರುತಿಸಲಾಯಿತು. ಅದರ ಪಕ್ಕದಲ್ಲಿರುವ ಇನ್ನೊಂದು ಫೊಟೊ ಈ ಮನೆಗೆ ಸಂಬಂದಪಟ್ಟಿದ್ದು ಹೌದೊ ಅಲ್ಲವೊ ಎಂದಾಗ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ತೊರಿದ ಆರೋಪಿ ಹಾಜರುಪಡಿಸಿದ 5 ಫೊಟೊಗಳು ನಾನು ಕಟ್ಟಡ ಕಟ್ಟಿದ್ದರ ಕಟ್ಟಡಕ್ಕೆ ಸಂಬಂದಪಟ್ಟಿದ್ದು ಎಂದರೆ ಸರಿಯಲ್ಲ. ವಾಟರ್ ಟ್ಯಾಂಕ್ ಮೇಲೆ ಕಾರ್ ಪಾರ್ಕಿಂಗ ವ್ಯವಸ್ಥೆ ಮಾಡಿತ್ತು ಎಂದರೆ ಸರಿ. ನೀರಿನ ಟ್ಯಾಂಕ್ ರಸ್ತೆಗಿಂತ 5-6 ಅಡಿ ಮೇಲೆ

ಇತ್ತು ಎಂದರೆ ಸರಿಯಲ್ಲ. ಅದು ಒಂದೂವರೆ ಅಡಿ ಇತ್ತು. ನೀರಿನ ಟ್ಯಾಂಕ್ ಸುತ್ತ ಇರುವ ಕಾಲಂ ಗಳಲ್ಲಿ ಮಣ್ಣು ಮಾತ್ರ ಹಾಕಿದ್ದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕಾಲಂ ಸುತ್ತ ಉಸುಕು, ಕಡಿ, ಕಲ್ಲು, ಸಿಮೆಂಟ ಹಾಕಿ ಮುಚ್ಚುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತಾನು ಹಾಗೆ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಯಾವದೇ ಉಸುಕು, ಕಡಿ, ಕಲ್ಲು, ಸಿಮೆಂಟ ಹಾಕಿ ಕಾಲಂಗಳನ್ನು ಮುಚ್ಚಿಲ್ಲ ಎಂದರೆ ಸರಿಯಲ್ಲ. ಈ ಕಾಲಂಗಳ ಸುತ್ತೆಲ್ಲ ಉಸುಕು, ಕಡಿ, ಕಲ್ಲು, ಸಿಮೆಂಟ ಹಾಕಿ ತುಂಬಿಕೊಳ್ಳಲು ಮತ್ತು ಬೀಮ ಕೆಳಗಡೆ ಗೋಡೆ ಕಟ್ಟುವ ಸಲುವಾಗಿ ಆರೋಪಿ ರೂ 4,10,000/- ಹೆಚ್ಚಿಗೆ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ.

13. ಅಡುಗೆ ಕೋಣೆ ಸರಿಯಾಗಿ ಕಟ್ಟದೇ ಇರುವುದರಿಂದ ಅಲ್ಲಲ್ಲಿ ಒಡೆದು ಹೊಸದಾಗಿ ಕಟ್ಟಿದ್ದರಿಂದ ರೂ 1,60,000/- ಹೆಚ್ಚಿಗೆ ಖರ್ಚು ಬಂದಿದೆ ಎಂದರೆ ಸರಿಯಲ್ಲ. ನಾನು ಕಟ್ಟಿದ ಕಟ್ಟಡ 35 ಕಡೆ ಕ್ರ್ಯಾಕ್ ಬಂದಿದೆ ಎಂದರೆ ಸರಿಯಲ್ಲ. ಇವುಗಳನ್ನು ಸರಿಪಡಿಸಲು ಸುಮಾರು ರೂ 1,80,000/- ಹೆಚ್ಚಿಗೆಯಾಗಿ ಆರೋಪಿ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಸರಿಯಾಗಿ ವಿದ್ಯುಚ್ಛಕ್ತಿಯ ವಾಯರಗಳನ್ನು ಹಾಕದೇ ಅವೈಜ್ಞಾನಿಕವಾಗಿ ನಿರ್ಮಿಸಿದ್ದರಿಂದ ಅವುಗಳನ್ನು ಸರಿ ಮಾಡಿಸುವ ಸಲುವಾಗಿ ರೂ 80,000/- ಹೆಚ್ಚಿನ ಖರ್ಚು ಬಂದಿದೆ ಎಂದರೆ ಸರಿಯಲ್ಲ. ಮನೆ ಕಟ್ಟಡ ಕಾರ್ಯದಲ್ಲಿ ನಾನು ಸರಿಯಾಗಿ ನಿರ್ಮಾಣ ಮಾಡದೇ ಇರುವುದರಿಂದ ಇತರೆಯಾಗಿ ಆರೋಪಿಗೆ ರೂ 30,000/- ಖರ್ಚು ಬಂದಿದೆ ಎಂದರೆ ಸರಿಯಲ್ಲ. ನಾನು ಕಟ್ಟಡ ಸರಿಯಾದ ರೀತಿಯಲ್ಲಿ ಕಟ್ಟದೇ ಇರುವುದರಿಂದ ಆರೋಪಿ ಹೆಚ್ಚಿಗೆಯಾಗಿ ರೂ 11,90,000/- ರಿಪೇರಿ ಖರ್ಚು ಬಂದಿದೆ ಎಂದರೆ ಸರಿಯಲ್ಲ.

14. ಆರೋಪಿ ಬಾಡಿಗೆ ಮನೆಯಲ್ಲಿ ವಾಸವಿರುವ ವಿಚಾರ ಗೊತ್ತಿಲ್ಲ. ನನ್ನ ಪ್ರಕಾರ ಕಟ್ಟಡದ ಕೆಲಸವನ್ನು 11 ತಿಂಗಳನಲ್ಲಿ ಮುಗಿಸಬೇಕಾಗಿತ್ತು. ನಾನು ಸರಿಯಾಗಿ ಕಟ್ಟಡ ನಿಗದಿತ ವೇಳೆಯಲ್ಲಿ ಮಾಡದೇ ಇರುವುದರಿಂದ ಆರೋಪಿಗೆ ರೂ 1,50,000/- ಹೆಚ್ಚಿಗೆ ಬಾಡಿಗೆ ನೀಡುವಂತಾಗಿ ತೊಂದರೆಯಾಗಿದೆ ಎಂದರೆ ಸರಿಯಲ್ಲ. ಈ ರೀತಿ ತೊಂದರೆ ನಾನು ಮಾಡಿದ್ದರಿಂದ ಅವರು ರೂ 5,85,000/- ಹೆಚ್ಚಿಗೆ ಬಡ್ಡಿಯನ್ನು ಸಾಲದ ಮೇಲೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಕೆಲಸ ಬಿಟ್ಟಾಗ ರೂ 32,45,562/- ಅಷ್ಟು ಮೊತ್ತದ ಮಾತ್ರ

ಕಟ್ಟಡ ಆಗಿತ್ತು ಎಂದರೆ ಸಾಕ್ಷಿ ರೂ 10,00,000/- ಮೊತ್ತದ ಮಟಿರಿಯಲ್ ಇತ್ತು ಎಂದು ನುಡಿಯುತ್ತಾರೆ. ನಾನು ಕಟ್ಟಡ ಬಿಡುವಾಗ ಮಟಿರಿಯಲ್ ಬಿಟ್ಟು ರೂ 35,00,000/- ಮೊತ್ತದ ಕಟ್ಟಡ ಆಗಿತ್ತು. ನಿಪಿ.1 ಚೆಕ್ ಮೊತ್ತದಲ್ಲಿ ಮಟಿರಿಯಲ್ ಮೊತ್ತ ಒಳಗೊಂಡಿದೆಯಾ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಆರೋಪಿ ನನಗೆ ರೂ 22 ಲಕ್ಷ ಚಿಲ್ಲರೆ ಹಣ ಕೊಟ್ಟಿದ್ದಾರೆ. ನಿಪಿ.1 ಚೆಕ್ನಲ್ಲಿರುವ ಮೊತ್ತ ಕಟ್ಟಡ ಕಟ್ಟಿದ್ದು ಮತ್ತು ಮಟಿರಿಯಲ್ ಹಣ ಒಳಗೊಂಡಿದೆ. ಎಷ್ಟು ಮೊತ್ತದ ಮಟಿರಿಯಲ್ ಗಳು ಹಾಗೂ ಏನೇನು ಇದ್ದವು ಅಂತಾ ನನ್ನ ದೂರಿನಲ್ಲಿ ಬರೆದಿಲ್ಲ. ಇಲ್ಲಿಯವರೆಗೂ ನಾನು ಸದರಿ ಕಟ್ಟಡವನ್ನು ಯಾರಿಂದಲೂ ಮೌಲ್ಯ ಮಾಡಿಸಿಲ್ಲ. ಸದರಿ ಮೌಲ್ಯ ಮಾಡಲು ಎಕ್ಸಪರ್ಟ್ ಅವಶ್ಯಕತೆ ಇದೆ ಎಂದರೆ ಸರಿ.

15. ನಿಪಿ.1 ಚೆಕ್ ಮೇಲೆ ಇರುವ ಆರೋಪಿಯ ಸಹಿ ಹೊರತುಪಡಿಸಿ ಉಳಿದ ಬರವಣಿಗೆಗಳು ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನನ್ನು ನಂಬಿದ್ದ ಎಂದರೆ ಸರಿ. ಈ ರೀತಿ ನನ್ನ ಮೇಲೆ ನಂಬಿಕೆ ಇದ್ದದ್ದರಿಂದ ನಾನು ಹೇಳಿದಂತೆ ಹೆಸ್ಕಾಂ ಇಲಾಖೆ ಇವರಿಗೆ ಸಹಿ ಮಾಡಿರುವ ಖಾಲಿ ಚೆಕ್ಕು ಕೊಡಬೇಕಾಗುತ್ತದೆ ಅಂತಾ ಹೇಳಿದ್ದರಿಂದ ಆರೋಪಿ ನನಗೆ ನಿಪಿ.1 ಸಹಿ ಮಾಡಿರುವ ಖಾಲಿ ಚೆಕ್ಕನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ವಿಷಯವೇ ನಿಡಿ.5 ಪೆಂಡ್ರೈವ್ ಸಂಬಾಷಣೆಯಲ್ಲಿದ್ದು ಅದನ್ನು ಒಪ್ಪಿಕೊಂಡರೆ ಸತ್ಯ ಗೊತ್ತಾಗುತ್ತದೆ ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಸಂಬಂದವಾಗಿ ವಿದ್ಯಾಗಿರಿ ಧಾರವಾಡ ಪೊಲಿಸನವರಿಗೆ ಆರೋಪಿ ದೂರು ಕೊಟ್ಟಿದ್ದು ಆ ವಿಚಾರವಾಗಿ ನನ್ನನ್ನು ಕರೆಸಿ ವಿಚಾರಣೆ ಮಾಡಿ ವಿಚಾರಣಾ ವರದಿಯನ್ನು ಸಹ ಪೊಲಿಸರು ನೀಡಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕರಣ ಇನ್ನು ನಡೆಯುತ್ತಿದ್ದು ಈ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ನಾನು ಯಾವದೇ ಕಟ್ಟಡಗಳನ್ನು ಇಲ್ಲಿಯವರೆಗೂ ಪೂರ್ತಿ ಮಾಡಿಲ್ಲ ಎಂದರೆ ಸಾಕ್ಷಿ ನಾನು ಪೂರ್ಣ ಮಾಡಿದ್ದು ಅದು ದಾರವಾಡದಲ್ಲಿ ಇದೆ. ಸನ್ 2022-23 ರಲ್ಲಿ ಕಟ್ಟಡ ಪೂರ್ಣ ಮಾಡಿದ್ದೇನೆ. ಅದಕ್ಕೆ ಸಂಬಂದಪಟ್ಟ ದಾಖಲಾತಿ ಹಾಜರುಪಡಿಸುತ್ತೇನೆ. ನಾನು ಕಟ್ಟಡ ಕಟ್ಟಲು ಯಾವದೇ ಪರಿಣಿತಿ ಹೊಂದದೇ ಇದ್ದರೂ ಸಹ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿ ಆರೋಪಿಗೆ ಮತ್ತು ಸಾರ್ವಜನಿಕರಿಗೆ ಮೋಸ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಎಸ್ ಸಿ ಎಸ್ ಟಿ ಕಮ್ಯುನಿಟಿಗೆ ಸೇರಿರುವುದರಿಂದ ಆರೋಪಿಯ ಮೇಲೆ ಕಮ್ಯುನಿಟಿಗೆ

ಸಂಬಂದಪಟ್ಟಂತೆ ಪ್ರಕರಣ ಹಾಕುತ್ತೇನೆ ಅಂತಾ ಹೆದರಿಸಿದ್ದೆ ಎಂದರೆ ಸರಿಯಲ್ಲ. ನಾನು ಈ ರೀತಿ ಹೆದರಿಕೆ ಕೊಟ್ಟಿದ್ದರಿಂದ ಬೇರೆಯವರು ಸಹ ಬಂದು ಕಟ್ಟಡ ಪ್ರಾರಂಬಿಸಿಲ್ಲ ಹಾಗೂ 8-10 ತಿಂಗಳು ವಿಳಂಬ ಆಗಿದೆ ಎಂದರೆ ಸರಿಯಲ್ಲ. ನಾವು ಹಾಕಿರುವ ಸಿಸಿ ಟಿ ವಿ ಯಾವಾಗ ತೆಗೆದಿರಿ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ ತಾನು ತೆಗೆದಿಲ್ಲ ಬೇರೆ ಯಾರೊ ತೆಗೆದುಕೊಂಡು ಹೋಗಿದ್ದಾರೆ ಎಂದು ನುಡಿಯುತ್ತಾರೆ. ನಾನು ಒಂದೇ ಸಿಸಿ ಟಿ ವಿ ಕೂಡಿಸಿದ್ದೆ. ಕೊನೆಯದಾಗಿ ಅದನ್ನು ಯಾವಾಗ ನೋಡಿದ್ದೇನೆ ಎನ್ನುವುದು ಗೊತ್ತಿಲ್ಲ. ಸದರಿ ಸಿಸಿ ಟಿ ವಿ ನನ್ನ ಮೊಬೈಲಗೆ ಲಿಂಕ್ ಇದೆ ಎಂದರೆ ಸರಿ. ಸಿಸಿ ಟಿ ವಿಯನ್ನು ನನ್ನ ಮೊಬೈಲನಲ್ಲಿ ನೋಡಿ ಬಿಟ್ಟು ಕಟ್ಟಡ ಕಟ್ಟಲು ಬಂದವರ ಜೊತೆ ಜಗಳ ತೆಗೆಯುತ್ತಿದ್ದೆ ಎಂದರೆ ಸರಿಯಲ್ಲ. ಈ ರೀತಿ ನಾನು ಆರೋಪಿಗೆ ತೊಂದರೆ ಕೊಟ್ಟಿದ್ದರಿಂದ ಮತ್ತು ಸರಿಯಾಗಿ ಕಟ್ಟಡ ಕಟ್ಟದೇ ಇರುವುದರಿಂದ ಆರೋಪಿಗೆ ನಾನು ರೂ 27,94,438/- ಮೊತ್ತ ಕೊಡಬೇಕಾಗಿದ್ದು ಆ ಹಣವನ್ನು ಕೊಡುವದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ಸುಳ್ಳು ಚೆಕ್ ಬೌನ್ಸ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

16. ನಾನು ಕಟ್ಟಡ ಕಟ್ಟುವಲ್ಲಿ ಪರಣಿತಿ ಹೊಂದಿದ್ದರ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಮೋಸ ಮಾಡಿ ರೇಣುಕಾ ಕನ್ಸ್ಟ್ರಕ್ಷನ್ ಪಡೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ಉದ್ಯೊಗ ಸುಳ್ಳು ಹೇಳಿ ಕಟ್ಟಡ ಕೆಲಸ ಪ್ರಾರಂಬಿಸುವುದು, ಸರಿಯಾಗಿ ಕಟ್ಟಡ ಕಟ್ಟದೇ ಹೆಚ್ಚಿಗೆ ಹಣ ಪಡೆದುಕೊಳ್ಳುವುದು, ಚೆಕ್ ಪಡೆದುಕೊಂಡು ದುರುಪಯೋಗ ಮಾಡಿಕೊಳ್ಳುವುದು ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವದೇ ಹಣ ಬಾಕಿ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಕಟ್ಟಡ ಕಟ್ಟಿದ್ದಕಿಂತ ಹೆಚ್ಚಿಗೆಯಾಗಿ ರೂ 3,69,438/- ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ಸೌಮ್ಯ ಸ್ವಬಾವದವರಾಗಿದ್ದು ಅವರಿಂದ ಹೆಚ್ಚಿಗೆ ಹಣ ಪಡೆಯುವ ಸಲುವಾಗಿ ಸುಳ್ಳು ನೊಟಿಸ ಕೊಟ್ಟು ಸುಳ್ಳು ಚೆಕ್ ಬೌನ್ಸ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.